# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿನ ವಿದ್ಯಾಸಂಸ್ಥೆಗಳಲ್ಲಿ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ.

**ಓದಲಾಗಿದೆ :-**

1. ಮಾನ್ಯ ಮುಖ್ಯಮಂತ್ರಿಯವರು ದಿನಾಂಕ : 24-02-2011ರಂದು ಮಂಡಿಸಿದ ಕೃಷಿ ಆಯವ್ಯಯ ಭಾಷಣ.
2. (1) ಬೆಂಗಳೂರು, (2) ಧಾರವಾಡ ಮತ್ತು (3) ರಾಯಚೂರು ಕೃಷಿ ವಿಶ್ವವಿದ್ಯಾಲಯಗಳ ಸಲ್ಲಿಸಿರುವ ದಿನಾಂಕ : 19-05-2011, ದಿನಾಂಕ : 23-05-2011 ಮತ್ತು 23-05-2011ರ ಪ್ರಸ್ತಾವನೆಗಳು.

**ಪ್ರಸ್ತಾವನೆ :-**

ಮಾನ್ಯ ಮುಖ್ಯಮಂತ್ರಿಯವರು ಮೇಲೆ-1ರಲ್ಲಿ ಓದಲಾದ ದಿನಾಂಕ : 24-02-2011ರಂದು ಮಾಡಿದ ಕೃಷಿ ಆಯವ್ಯಯ ಭಾಷಣ ಕಂಡಿಕೆ-47ರಲ್ಲಿ ಕೃಷಿ, ತೋಟಗಾರಿಕೆ, ಪಶುಪಾಲನೆ ಹಾಗೂ ಮೀನುಗಾರಿಕೆ ವಿಷಯಗಳಲ್ಲಿ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು 2011-12 ಸಾಲಿನಿಂದಲೇ ಪ್ರಾರಂಭಿಸುವುದಾಗಿ ಘೋಷಿಸಿದ್ದಾರೆ. ಸದರಿ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ಮೇಲೆ-2ರಲ್ಲಿ ಓದಲಾದ ಪತ್ರಗಳಂತೆ ಬೆಂಗಳೂರು, ಧಾರವಾಡ ಮತ್ತು ರಾಯಚೂರು ಕೃಷಿ ವಿಶ್ವವಿದ್ಯಾಲಯಗಳಿಂದ ವಿವರವಾದ ಮಾಹಿತಿ ಮತ್ತು ಪ್ರಸ್ತಾವನೆಗಳನ್ನು ಪಡೆದು ಪರಿಶೀಲಿಸಲಾಗಿದೆ.

ಪ್ರಸ್ತಾವನೆಯ ಬಗ್ಗೆ ಯೋಜನಾ ಇಲಾಖೆಯು ದಿನಾಂಕ : 24-06-2011ರಂದು ತನ್ನ ಸಹಮತಿಯನ್ನು ನೀಡಿದೆ. ಅಂತೆಯೇ ಆರ್ಥಿಕ ಇಲಾಖೆಯೂ ದಿನಾಂಕ : 26-07-2011ರಂದು ಪ್ರಸ್ತಾವನೆಗೆ ತಗಲುವ ವೆಚ್ಚವನ್ನು ಹಾಲಿ ಆಯವ್ಯಯ-2ರಲ್ಲಿ ಭರಿಸುವ ಷರತ್ತಿಗೆ ಒಳಪಟ್ಟು ತನ್ನ ಅನುಮೋದನೆಯನ್ನು ನೀಡಿದೆ. ಮುಂದುವರೆದು ಶಿಕ್ಷಣದ ವೆಚ್ಚದ ಉದ್ದೇಶಗಳಿಗಾಗಿ ಒದಗಿಸಲಾದ ಯೋಜನಾ ಅನುದಾನದಲ್ಲಿ ಲಭ್ಯವಿರುವ ಮೊತ್ತದಿಂದ ಭರಿಸುವ ಬಗ್ಗೆ ಪರಿಶೀಲಿಸುವಂತೆಯೂ ತಿಳಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಕೃಇ 120 ಕೃವಿಪ 2011**

**ಬೆಂಗಳೂರು, ದಿನಾಂಕ : 22-11-2011**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಮೇರೆಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟ ವಿ.ಸಿ ಫಾರಂ (ಕೃಷಿ ಮಹಾವಿದ್ಯಾಲಯ, ಮಂಡ್ಯ ಜಿಲ್ಲೆ) ಮತ್ತು ಕತ್ತಲಗೆರೆ (ಕೃಷಿ ಸಂಶೋಧನಾ ಕೇಂದ್ರ, ದಾವಣಗೆರೆ ಜಿಲ್ಲೆ), ಧಾರವಾಡ ಕೃಷಿ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟ ಧಾರವಾಡ, ಬಿಜಾಪುರ, ಶಿರಸಿ, ಬಾಗಲಕೋಟೆ, ಬೆಳಗಾವಿ ಮತ್ತು ಹಾವೇರಿ

...2

ಜಿಲ್ಲೆಗಳಲ್ಲಿ ಹಾಗೂ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟ ರಾಯಚೂರು (ಕೃಷಿ ಮಹಾವಿದ್ಯಾಲಯ ಮತ್ತು ಕೃಷಿ ತಾಂತ್ರಿಕ ಮಹಾವಿದ್ಯಾಲಯ) ಮತ್ತು ಭೀಮರಾಯನಗುಡಿಯಲ್ಲಿ (ಕೃಷಿ ಮಹಾವಿದ್ಯಾಲಯ, ಶಹಪುರ ತಾಲ್ಲೂಕು) 2011–12ನೇ ಸಾಲಿನಿಂದ 2 ವರ್ಷಗಳ ಕೃಷಿಯಲ್ಲಿ ಡಿಪ್ಲೊಮಾ ಮತ್ತು 6 ತಿಂಗಳುಗಳ ಅವಧಿಯ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿಯನ್ನು ನೀಡಲಾಗಿದೆ.

ಮೇಲ್ಕಂಡ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು 2011–12ನೇ ಸಾಲಿನಿಂದ ಪ್ರಾರಂಭಿಸಲು ಮೂರೂ ಕೃಷಿ ವಿಶ್ವವಿದ್ಯಾಲಯಗಳಿಗೆ 2011–12ನೇ ಸಾಲಿನಲ್ಲಿ ರೂ. 15.00 ಕೋಟಿ ಒದಗಿಸಲಾಗಿದೆ. ರೂ. 15.00 ಕೋಟಿಗಳನ್ನು 2012–13ನೇ ಸಾಲಿಗೆ ನಿಗದಿಪಡಿಸಿದ್ದು ಆ ಹಣ ಮುಂದಿನ ವರ್ಷದಲ್ಲಿ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಅವಶ್ಯಕತೆ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು. ಪ್ರಸ್ತುತ 2011–12ನೇ ಸಾಲಿನಲ್ಲಿ ಆಯಾ ವಿದ್ಯಾಸಂಸ್ಥೆಗಳಲ್ಲಿ ಪ್ರವೇಶಾವಕಾಶಕ್ಕೆ ನಿಗದಿಪಡಿಸಿರುವ ವಿದ್ಯಾರ್ಥಿಗಳ ಸಂಖ್ಯೆಯಂತೆ, ಪ್ರತಿಯೊಬ್ಬ ವಿದ್ಯಾರ್ಥಿಗೆ ಮಾಸಿಕ ರೂ. 1000/–ದಂತೆ ವಿದ್ಯಾರ್ಥಿ ವೇತನ ನೀಡತಕ್ಕದ್ದು. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ವೇತನ ಇತ್ಯಾದಿ, ಕಟ್ಟಡ, ಪೀಠೋಪಕರಣ ಮುಂತಾದ ಸ್ಥಿರ ಹಾಗೂ ಪುನರಾವರ್ತಿತ ವೆಚ್ಚಗಳನ್ನು ಭರಿಸುವ ಸಲುವಾಗಿ ಅಗತ್ಯವಾದ ಅನುದಾನವನ್ನು ಅನುಬಂಧ–1ರಲ್ಲಿ ಗುರುತಿಸಿದ್ದು ಶೀಘ್ರವಾಗಿ ಬಿಡುಗಡೆ ಮಾಡಲಾಗುವುದು. ಇದನ್ನು ಅವಶ್ಯಕತೆ ಗಮನಿಸಿ, ಪೂರ್ವಭಾವಿಯಾಗಿ ಯೋಜಿಸಿ, ಬಿಡುಗಡೆ ಮಾಡತಕ್ಕದ್ದು. ಸ್ಥಿರ ವೆಚ್ಚವನ್ನು ಒಮ್ಮೆ ಮಾತ್ರ ಅನುದಾನವಾಗಿ 2011–12ನೇ ಸಾಲಿಗೆ ನೀಡಲಾಗಿದೆ.

ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ ರೂ. 498.60 ಲಕ್ಷಗಳು, ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ ರೂ. 488.60 ಲಕ್ಷಗಳು ಮತ್ತು ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ ರೂ. 493.20 ಲಕ್ಷಗಳಂತೆ ಹಂಚಿಕೆ ಮಾಡಿದ್ದು ಈ ಮೊತ್ತವನ್ನು ಲಭ್ಯವಿರುವ ಯೋಜನಾ ಅನುದಾನದಿಂದ ಬಿಡುಗಡೆ ಮಾಡಬೇಕಾಗುತ್ತದೆ.

ಈ ಆದೇಶವನ್ನು ದಿನಾಂಕ : 24–06–2011ರ ಟಿಪ್ಪಣಿ ಸಂಖ್ಯೆ : ಪಿಡಿ 47 ಪಿಎಪಿ 2011ರಲ್ಲಿ ಯೋಜನೆ, ಕಾರ್ಯಕ್ರಮ ನಿರ್ವಹಣೆ ಮತ್ತು ಸಾಂಖ್ಯಿಕ ಇಲಾಖೆಯು ಮತ್ತು ದಿನಾಂಕ :

...3

28-07-2011ರ ಟಿಪ್ಪಣಿ ಸಂಖ್ಯೆ : ಎಫ್‌ಡಿ 284 ವ-4/2011ರಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಅಭಿಪ್ರಾಯ ಹಾಗೂ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಸೇವೆಗಳು)

ಇವರಿಗೆ :-
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ವಿಕಾಸಸೌಧ ಘಟಕ, ಬೆಂಗಳೂರು-ಮುಂದಿನ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲು ಮತ್ತು ಕೃಷಿ-ಬಿ ಶಾಖೆಗೆ ಪ್ರಕಟಿತ ಆದೇಶವನ್ನು ಒಳಗೊಂಡಿರುವ ರಾಜ್ಯಪತ್ರದ 50 ಪ್ರತಿಗಳನ್ನು ಒದಗಿಸಲು ಕೋರಿದೆ.

ಪ್ರತಿಗಳು :-
1. ಮಹಾಲೇಖಪಾಲರು, ಕರ್ನಾಟಕ (ಲೆಕ್ಕಪತ್ರ/ತನಿಖೆ), ಬೆಂಗಳೂರು.
2. * ಘನವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಯವರು, ರಾಜಭವನ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಕುಲಪತಿಯವರುಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು/ಧಾರವಾಡ/ರಾಯಚೂರು.
6. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ/ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
7. ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ/ಯೋಜನಾ ಇಲಾಖೆ/ಶಿಕ್ಷಣ ಇಲಾಖೆ/ತೋಟಗಾರಿಕೆ ಇಲಾಖೆ/ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
9. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
10. ಕುಲಸಚಿವರುಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು/ಧಾರವಾಡ/ರಾಯಚೂರು.
11. ಡೀನ್/ಹಿರಿಯ/ಫಾರಂ ಸೂಪರಿಂಟೆಂಡೆಂಟ್, ಕೃಷಿ ಮಹಾವಿದ್ಯಾಲಯ/ಸಂಶೋಧನಾ ಕೇಂದ್ರ (1) ವಿ.ಸಿ. ಫಾರಂ-ಮಂಡ್ಯ ಜಿಲ್ಲೆ, (2) ಕತ್ತಲಗೆರೆ (ದಾವಣಗೆರೆ ಜಿಲ್ಲೆ), (3) ಧಾರವಾಡ, (4) ಬಿಜಾಪುರ, (5) ಶಿರಸಿ, (6) ಬಾಗಲಕೋಟೆ, (7) ಬೆಳಗಾವಿ, (8) ಹಾವೇರಿ, (9) ರಾಯಚೂರು, (10) ಭೀಮರಾಯನಗುಡಿ (ಯಾದಗಿರಿ ಜಿಲ್ಲೆ).
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4 [illegible]), ವಿಧಾನ ಸೌಧ, ಬೆಂಗಳೂರು.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

* ಪ್ರತ್ಯೇಕ ಮುಖಪತ್ರದೊಂದಿಗೆ.